ಓ.ಎಸ್ಃ 364 /2008

ಪಿ. ಡಬ್ಲ್ಯೂ ಃ 01

**<u>ಸಾಕ್ಷಿಗೆ ದಿನಾಂಕ 01.02.2020 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ 8 ಮತ್ತು 9 ನೇ ಪ್ರತಿವಾದಿ ಪರ ಶ್ರೀ/ಎನ್ ಕೆ ಎಸ್ ವಕೀಲರಿಂದ</u>**

ನಮ್ಮ ತಂದೆ ತಾಯಿಗೆ 6 ಜನ ಗಂಡು ಮಕ್ಕಳು, ಇಬ್ಬರು ಹೆಣ್ಣುಮಕ್ಕಳು. ಗಂಡುಮಕ್ಕಳುಗಳ ಹೆಸರು ನಾಗರಾಜು , ಕೃಷ್ಣಾನಂದ , ಸುರೇಶ , ರಾಜೇಂದ್ರ , ರವಿಕುಮಾರ್ , ಪ್ರಕಾಶ, ಹಾಗೂ ಹೆಣ್ಣುಮಕ್ಕಳ ಹೆಸರು ನಾಗರತ್ನ ಮತ್ತು ನಾನು . ನನ್ನ ಮದುವೆಯಾಗಿ ಈಗ 35 ವರ್ಷಗಳಾಗಿವೆ . ನನ್ನ ಮದುವೆಯನ್ನು ನಮ್ಮ ತಂದೆ ತಾಯಿ ಮಾಡಿರುತ್ತಾರೆ. ನನ್ನನ್ನು ಕಾರೆಕುರ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿರುತ್ತಾರೆ. ನನ್ನ ಮದುವೆಯಾದ ನಂತರ ನಾನು ನನ್ನ ಗಂಡನ ಮನೆಯಲ್ಲೇ ವಾಸವಿದ್ದೆ ಈಗ ಸುಮಾರು 7 ವರ್ಷಗಳಿಂದ ಕೆಲಸದ ನಿಮಿತ್ತ ಮೈಸೂರಿನ ಹೆಬ್ಬಾಳದಲ್ಲಿ ವಾಸವಿದ್ದೇನೆ. ನನ್ನ ತಂದೆ ತೀರಿಕೊಂಡು ಸುಮಾರು 25 ವರ್ಷಗಳಾಗಿವೆ. ನನ್ನ ತಾಯಿ ತೀರಿಕೊಂಡು ಸುಮಾರು 10 ವರ್ಷಗಳಾಗಿವೆ. ನನ್ನ ತಾತನಿಗೆ ಇಬ್ಬರು ಗಂಡು ಮಕ್ಕಳು ಅವರುಗಳೆಂದರೆ ನನ್ನ ತಂದೆ ಜವರೇಗೌಡ ಉ ಸಪ್ಪೇಗೌಡ ಹಾಗೂ ಮಹದೇವು . ಅವರಿಗೆ ಇಬ್ಬರು ಹೆಣ್ಣುಮಕ್ಕಳು ಅವರುಗಳೆಂದರೆ ತಾಯಮ್ಮ ಹಾಗೂ ಲಕ್ಷ್ಮಮ್ಮ . ನಮ್ಮ ಕುಟುಂಬಕ್ಕೆ ಒಟ್ಟು 10 ಎಕರೆ ಜಮೀನು ಇದ್ದು ಅವುಗಳ ಸರ್ವೆ ನಂ ನನಗೆ ಗೊತ್ತಿಲ್ಲ. ಹೊಸಹಳ್ಳಿ ಯಲ್ಲಿ 2 ಎಕರೆ 8 ಗುಂಟೆ , ಚಿಕ್ಕ ಕಾಲುವೆಯಲ್ಲಿ 1 ಎಕರೆ , ಕಾರೆಕುರ ಗ್ರಾಮದಲ್ಲಿ 3 ಎಕರೆ

ಮತ್ತು 1 ವರೆ ಎಕರೆ ತೋಟವಿದೆ. ಪಾಲಹಳ್ಳಿ ಗ್ರಾಮದ ಹತ್ತಿರ 3 ಎಕರೆ ಜಮೀನು ಇದೆ. ನಾನು ಸದರಿ 10 ಎಕರೆ ಜಮೀನಿಗೆ ಸಂಬಂಧಪಟ್ಟಂತೆ ದಾವೆಯನ್ನು ಸಲ್ಲಿಸಿರುತ್ತೇನೆ. ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪನ ನಡುವೆ ಕುಟುಂಬದ ಆಸ್ತಿಗಳಲ್ಲಿ ವಿಭಾಗವಾಗಿತ್ತು. ಸದರಿ ವಿಭಾಗದಲ್ಲಿ ನಮ್ಮ ಕುಟುಂಬಕ್ಕೆ 10 ಎಕರೆ ಜಮೀನು ಬಂದಿತ್ತು ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ಯಾವುದೇ ವಿಭಾಗ ಆಗಿಲ್ಲ.

2006 ನೇ ಇಸವಿಯಲ್ಲಿ ನಾನು ಪಿ ಹೊಸಹಳ್ಳಿ ಹಾಗೂ ಕಾರೆಕುರ ಗ್ರಾಮದಲ್ಲಿ ವಾಸವಿರಲಿಲ್ಲ. ದಿನಾಂಕ 15.06.2016 ರಂದು ನನ್ನ ತಾಯಿ ಮತ್ತು ನನ್ನ ಅಣ್ಣ ತಮ್ಮಂದಿರು ಸೇರಿಕೊಂಡು ದಾವಾ ಸ್ವತ್ತಿನ ಐಟಂ ನಂ 1 ನ್ನು 8 ಮತುತ 9 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ . ನನ್ನ ಅಣ್ಣ ತಮ್ಮಂದಿರ ಮಕ್ಕಳೂ ಕೂಡಾ ಕ್ರಯ ಪತ್ರ ಹಾಗೂ ಹಕ್ಕು ಕುಲಾಸೆ ಪತ್ರಕ್ಕೆ ಸಹಿಯನ್ನು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಕ್ರಯಕ್ಕೆ ಪಡೆದ ದಿನದಿಂದಲೂ ಪ್ರತಿವಾದಿ 8 ಮತ್ತು 9 ರವರು ದಾವಾ ಷೆಡ್ಯೂಲ್ ಸ್ವತ್ತಿನ ಐಟಂ ನಂ 1 ರಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ . ನಾನು 8 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ದಾವಾ ಷೆಡ್ಯೂಲ್ ಸ್ವತ್ತುಗಳ ಸರ್ವೆ ನಂ ಹಾಗೂ ಚೆಕ್ ಬಂದಿಗಳು ನನಗೆ ಗೊತ್ತಿಲ್ಲ. ನಮ್ಮ ವಕೀಲರಿಗೆ ದಾವೆಯ ಮಾಹಿತಿಯನ್ನು ನಾನೇ ಖುದ್ದಾಗಿ ತಿಳಿಸಿರುತ್ತೇನೆ. ದಾವಾ ಐಟಂ ನಂ 2 ರಿಂದ 4 ರಲ್ಲಿ ಯಾರು ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ಅವುಗಳನ್ನು ಈಗಾಗಲೇ ಮಾರಾಟ ಮಾಡಿರುತ್ತಾರೆ ಖರೀದಿದಾರರ ಹೆಸರು ನನಗೆ

ಗೊತ್ತಿಲ್ಲ ಎನ್ನುತ್ತಾರೆ. ನಾನು ಹಾಗೂ ನನ್ನ ಅಣ್ಣತಮ್ಮಂದಿರು ಈಗ ಜೊತೆಯಾಗಿ ವಾಸವಿಲ್ಲ ಎಂದರೆ ಸರಿ . ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ದಾವಾ ಷೆಡ್ಯೂಲ್ ಸ್ವತ್ತಿನ ಖರೀದಿದಾರರಿಗೆ ನಾನು ನೋಟಿಸನ್ನು ಕೊಟ್ಟಿಲ್ಲ ಸಾಕ್ಷಿಯು ಮಾರಾಟ ಮಾಡಿದ ವಿಷಯ ನನಗೆ ಗೊತ್ತಿರಲಿಲ್ಲ ಎನ್ನುತ್ತಾರೆ. ನನ್ನ ತಾಯಿ ಹಾಗೂ ಅಣ್ಣ ತಮ್ಮಂದಿರು ಸೇರಿಕೊಂಡು ದವಾ ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಿದ ವಿಚಾರ ನನಗೆ ಮೊದಲೇ ಗೊತ್ತಿತ್ತು ಎಂದರೆ ಸರಿಯಲ್ಲ. ಮದುವೆಯಾದ ನಂತರ ನಾನು ಊರು ಬಿಟ್ಟು ಹೋಗಿ 25 ವರ್ಷಗಳಾಗಿವೆ ಹಾಗಾಗಿ ನನಗೆ ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂದಪಟ್ಟ ವಿಚಾರಗಳು ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ 1 ಸ್ವತ್ತನ್ನು ಈಗಾಗಲೇ ನನ್ನ ತಾಯಿ ಅಣ್ಣ ತಮ್ಮಂದಿರು ಹಾಗೂ ಅವರ ಮಕ್ಕಳು ಸೇರಿಕೊಂಡು 8 ಮತ್ತು 9 ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿದ್ದರಿಂದ ಸದರಿ ಆಸ್ತಿಯಲ್ಲಿ ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ